Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship

Volume 40 Issue - 18 04th November 2025

ಮುಖ್ಯ ಅತಿಥಿ :


ಶ್ರೀಮತಿ ಕಲ್ಪನಾ ಭಾಸ್ಕರ,

ಸದಸ್ಯರು, ಕ್ಲೀನ್ ಕುಂದಾಪುರ ಪ್ರಾಜೆಕ್ಟ್

ವಿಷಯ :

## ಪರ್ಯಾವರಣ ಸಂರಕ್ಷಣೆ ನಮ್ಮ ಹೊಣೆ

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನ ಒಲವಿನ ರೋಟರಿ ಸದಸ್ಯರೇ,

ಇಂದು ನನ್ನ ಮನಸ್ಸು ನಮ್ಮ ಹಿಂದಿನವರು ಹೇಳಿಕೊಟ್ಟ ಸಂಸ್ಕಾರಗಳ ಬಗ್ಗೆ ಸುಳಿದಾಡಿತು. ನಮ್ಮ ಸಂಸ್ಕೃತಿ, ಸಂಸ್ಕಾರ, ಆಚಾರ, ವಿಚಾರ ಸನಾತನ ಪದ್ದತಿ ಇತ್ಯಾದಿ ಇತ್ಯಾದಿ ವಿಚಾರಗಳ ಬಗ್ಗೆ ಗಂಟೆ ಗಟ್ಟಲೆ ಪ್ರವಚನಗಳನ್ನು ಅತಿರಥ ಮಹಾರಥ ಉಪನ್ಯಾಸಕರ ಪ್ರವಚನಗಳನ್ನು ಕೇಳುತ್ತೇವೆ. ಜೊತೆಯಲ್ಲಿ ಈ ಸಂಸ್ಕಾರಗಳ ಮಹತ್ವವನ್ನು ತಿಳಿಸುವ ಪುರಾಣದ ಕಥೆಗಳನ್ನು ಓದುತ್ತೇವೆ. ಆದರೆ ನಾವು ಒಮ್ಮೆ ನಮ್ಮ ಮನೆಯ ಅಜ್ಜಿಯಂದಿರ ಅಥವ ಮುತ್ತಜ್ಜಿಯಂದಿರ ಬದುಕನ್ನು ಅವಲೋಕನ ಮಾಡಬೇಕು. ಅದೇ ಒಂದು ಅಧ್ಯಯನಕ್ಕೆ ಪುಸ್ತಕ ಅದೇ ಒಂದು ಗ್ರಂಥ ವಾಹ್ ಇವರೇ ನಮ್ಮ ಸಂಸ್ಕೃತಿಯ ಇಂದಿನ ಕಾವಲುಗಾರರು. ನಮಗೆ ನಮ್ಮ ಹಿರಿಯರು ಹೇಳುವಾಗ ಕಿರಿ ಕಿರಿ ಅನ್ನಿಸಬಹುದು. ಆದರೆ ಒಮ್ಮೆ ಅವರು ಏಕೆ ನಮ್ಮ ಮೇಲೆ ಸಂಪ್ರದಾಯ ಪಾಲಿಸಲು ಒತ್ತಾಯ ಹೇರುತ್ತಾರೆ ಎಂದು ಯೋಚಿಸಿದರೆ ನಿಜವಾಗಲೂ ಹೆಮ್ಮೆ ಎನ್ನಿಸುತ್ತದೆ. ಎಲ್ಲಾ ನಮ್ಮ ಒಳ್ಳೆಯದಕ್ಕೆ ಎಲ್ಲಾದರೂ ತಪ್ಪಿದರೆ ನಂಬಿದ ದೈವ ಶಾಪ ಕೊಟ್ಟು ಬಿಟ್ರೆ? ಎನ್ನುವ ಈ ಭಾವನೆಯೇ ನಮ್ಮನ್ನು ಇಂದೂ ಕಾಪಾಡುತ್ತಿದೆ. ಯುಗಾದಿಗೆ ಏನೆಲ್ಲಾ ಪಾಲಿಸಬೇಕು?, ಗೌರಿ ಗಣೇಶನ ಹಬ್ಬಕ್ಕೆ ಏನೆಲ್ಲಾ ಮಾಡಬೇಕು?, ಸಂಕ್ರಾಂತಿಗೆ ಏನು ಮಾಡಬೇಕು? ಗ್ರಹಣದ ದಿನ ಯಾವ ರೀತಿ ರಿವಾಜು ಪಾಲಿಸಬೇಕು, ದೈವದ ಮನೆ ಗೆಂಡ ಅಥವಾ ಕೋಲ ನೇಮೋತ್ಸವದಂದು ನಾವುಗಳು ಹೇಗೆ ನಡೆದುಕೊಳ್ಳಬೇಕು?, ಸಂಕಷ್ಟಿ ದಿನ ಏನು ಮಾಡಬೇಕು ಇತ್ಯಾದಿ ನೀವು ನಿಮ್ಮ ನಿಮ್ಮ ಮನೆಗಳಲ್ಲಿ ಇರುವ ಹಿರಿಯರನ್ನು ನೋಡಬೇಕು ಅವರು ಯಾವ ರೀತಿ ಇರುತ್ತಾರೆ ಎಂದು ತಾವು ಅದನ್ನು ಪಾಲಿಸುತ್ತಾರೆ ಹಾಗೂ ತಮ್ಮ ಹೆಣ್ಣು ಮಕ್ಕಳಿಗೂ ಹೇಳಿಕೊಟ್ಟಿರುತ್ತಾರೆ ಇದೇ ನಿಜವಾದ ಸಂಸ್ಕೃತಿ. ಇದು ಇಂದಿಗೂ ವಾಟ್ಸಪ್ ಹಾಗೂ ಫೇಸ್ ಬುಕ್ ಯುಗದಲ್ಲಿ  ಚಾಲ್ತಿಯಲ್ಲಿರುವುದು ಅಚ್ಚರಿಯೇ ಸರಿ ಅಥವಾ ನಮ್ಮ ಭರತ ಭೂಮಿಯ ಪುಣ್ಯವೋ ಒಟ್ಟಿನಲ್ಲಿ ನಮ್ಮ ದೇಶದ ಜನರ ಸಂಸ್ಕೃತಿಯ ನೈಜ ಶಕ್ತಿ ಎಂದು ಅನ್ನಿಸುತ್ತಿದೆ. ನಿಮಗೂ ಅನ್ನಿಸಿದರೆ ನಿಮ್ಮ ಮನೆಗಳಲ್ಲಿ ಹಬ್ಬ ಹರಿದಿನಗಳಲ್ಲಿ ನಿಮ್ಮ ಹಿರಿಯರೊಂದಿಗೆ ಆಚರಿಸಿ. ಅದನ್ನು ಅನುಭವಿಸಿ ಮಿತ್ರರೇ. ಇದು ಹೀಗೆ ಮುಂದುವರಿಯಲಿ ಹಾಗೂ ಜಾತಿ, ಮತ ಸಮುದಾಯ ಯಾವುದೇ ಇರಲಿ ನಮ್ಮ ಸಂಸ್ಕಾರ ನಮ್ಮತನ ಕಡೇ ಪಕ್ಷ ನಮ್ಮ ರೋಟರಿ ಸದಸ್ಯರುಗಳ ಕುಟುಂಬಗಳಲ್ಲಿ ಸದಾ ನಲಿಯುತ್ತಿರಲಿ ಎಂದು ನನ್ನ ಹಾರೈಕೆಗಳು.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ







ತಾ/29/10/2025 ಗುರುವಾರದಂದು ನಡೆದ ನಮ್ಮ ವಾರದ ಸಭೆಗೆ ಮುಖ್ಯ ಅತಿಥಿಗಳಾಗಿ ಶ್ರೀ ನಿಹಾಲ್ ಶೆಟ್ಟಿ ಅವರು ಆಗಮಿಸಿದ್ದರು. ಶ್ರೀಯುತರು ಕಾರನ್ನು ಉತ್ತಮವಾಗಿ ನಿರ್ವಹಣೆ ಮಾಡುವುದು ಹೇಗೆ ಎಂದು ಸವಿಸ್ತಾರವಾಗಿ ವಿವರಿಸಿದರು. ಇಂದು ಪ್ರಚಲಿತ ಇರುವ ಪಿಪಿಎಸ್ ಪಾಲಿಷಿಂಗ್ ಇದರ ಮಹತ್ವವನ್ನು ವಿವರಿಸಿದರು. ಆಗಮಿಸಿದ ಅತಿಥಿಗಳನ್ನು ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಸ್ವಾಗತಿಸಿದರು. ವಾರದ ವರದಿಯನ್ನು ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತ ಮಂಡಿಸಿದರು. ರೊ. ವಿವಿಯನ್ ಕ್ರಾಸ್ಟೋ ವಾರದ ಚಿಂತನೆ ಮಂಡಿಸಿದರು. ರೊ. ಜುಡಿತ್ ಮೆಂಡೋನ್ಸಾ ರೋಟರಿ ಮಾಹಿತಿ ತಿಳಿಸಿದರು. ಕಾರ್ಯಕ್ರಮದಲ್ಲಿ ಇನ್ನರ್‌ವೀಲ್ ಕುಂದಾಪುರ ದಕ್ಷಿಣದ ಅಧ್ಯಕ್ಷೆ ಆ್ಯನ್ ಸುಜಾತಾ ನಕ್ಕತಾಯ ತಾರೀಕು 4 ನವೆಂಬರ್ ಮಂಗಳವಾರದಂದು ಇನ್ನರ್‌ವೀಲ್ ಚೇರ್ಮನ್ ಅಧಿಕೃತ ಭೇಟಿಯ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಕಾರ್ಯಕ್ರಮದಲ್ಲಿ ಬಿ.ಬಿ. ಹೆಗಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಟಾಪರ್ ಆಗಿರುವ ವಿದ್ಯಾರ್ಥಿ ಶಮಂತ ಇವರಿಗೆ ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಆ ಹುಡುಗನ ವಿದ್ಯಾಭ್ಯಾಸದ ಪ್ರಯುಕ್ತ ರೂಪಾಯಿ 10,000/– ಸ್ಕಾಲರ್‌ಶಿಪ್ಪನ್ನು ಅಂದಿನ ಸಭೆಯಲ್ಲಿ ವಿತರಿಸಲಾಯಿತು. ಈ ವಿದ್ಯಾರ್ಥಿಯನ್ನು ರೊ. ಕೆ. ಕೆ. ಕಾಂಚನ್ ಸಭೆಗೆ ಪರಿಚಯಿಸಿದರು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮವು ರೊ. ನಂದಾ ನಾಯಕ್ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು. ಕಾರ್ಯಕ್ರಮದ ಅಂತ್ಯದಲ್ಲಿ ರೊ. ಸತ್ಯನಾರಾಯಣ  ಪುರಾಣಿಕ್ ಹಾಸ್ಯವನ್ನು ನಡೆಸಿಕೊಟ್ಟರು.






************************************************************

## ಹೆಮ್ಮಾಡಿ ರೈತರೊಂದಿಗೆ ದೀಪಾವಳಿ ಹಬ್ಬ ಆಚರಣೆ



ಉತ್ತಮ ಮಳೆ ಬಿಸಿಲು ಚಳಿ ಇದ್ದರೆ ರೈತನಿಗೆ ಹೆಚ್ಚು ಇಳುವರಿ ಪಡೆಯಲು ಸಾಧ್ಯ ಆದರೆ ಇವತ್ತಿನ ದಿನದಲ್ಲಿ ನಾಟಿ ಮಾಡುವ ಸಂದರ್ಭದಲ್ಲಿ ಮಳೆ ಇರುವುದಿಲ್ಲ ಕಟಾವು ಸಂದರ್ಭದಲ್ಲಿ ವಿಪರೀತ ಮಳೆ ಹೀಗಿದ್ದರೂ ರೈತರು ದೀಪಾವಳಿ ಹಬ್ಬವನ್ನು ಆಚರಿಸುವುದರಲ್ಲಿ ಮುಂದೆ ಬರುತ್ತಿದ್ದಾರೆ. ಆದರೆ ಸರ್ಕಾರವು ಸರಿಯಾದ ಮಾಹಿತಿಯನ್ನು ರೈತರಿಗೆ ನೀಡಬೇಕು. ರೈತರಿಗೆ ಸಿಗುವ ಸೌಲಭ್ಯವನ್ನು ನೇರವಾಗಿ ನಿಷ್ಠಾವಂತ ರೈತರು ಪ್ರಯೋಜನ ಪಡೆದುಕೊಳ್ಳುವಂತೆ ಮಾಡಬೇಕು ಎಂದು ಕನ್ಯಾನ ನಮ್ಮ ಭೂಮಿ ಸಂಸ್ಥೆ ಹಟ್ಟಿಯಂಗಡಿ ನಿರ್ದೇಶಕ ಶ್ರೀನಿವಾಸ ಗಾಣಿಗ ಹೇಳಿದರು. ಅವರು ಕುಂದಾಪುರ ರೋಟರಿ ಕ್ಲಬ್ ದಕ್ಷಿಣ, ನಮ್ಮ ಭೂಮಿ ಸಂಸ್ಥೆ ಹಟ್ಟಿಯಂಗಡಿ, ಮಹಾವಿಷ್ಣು ಯುವಕ ಮಂಡಲ ಹಾಗೂ ನಂದಿಕೇಶ್ವರ ಯುವ ಸಮಿತಿ ಇವರ ಆಶ್ರಯದಲ್ಲಿ ಹೆಮ್ಮಾಡಿ ಸಮೀಪ ನಡೆದ ರೈತರೊಂದಿಗೆ ದೀಪಾವಳಿ ಹಬ್ಬದ ಪ್ರಯುಕ್ತ ಸಂವಾದ ಹಾಗೂ ದೀಪದ ಹಣತೆ ವಿತರಿಸುವ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ದಕ್ಷಿಣದ ಅಧ್ಯಕ್ಷ ಸಚಿನ್ ನಕ್ಕತ್ತಾಯ ವಹಿಸಿದ್ದರು. ರೋಟರಿ ಕಾರ್ಯದರ್ಶಿ ಜೆರಾಲ್ಡ್ ಕ್ರಾಸ್ತ, ನಮ್ಮ ಭೂಮಿ ಸಂಸ್ಥೆಯ ಕಾರ್ಯಕರ್ತ ನರಸಿಂಹ ಗಾಣಿಗ, ಸೀತಾರಾಮ ಆಚಾರ್ಯ ಹರಗೋಡು,
ನಂದಿಕೇಶ್ವರ ದೇವಸ್ಥಾನದ ಆಡಳಿತ ಮಂಡಳಿಯ ಪುಟ್ಟ ದೇವಾಡಿಗ ಮೊದಲಾದವರು ಉಪಸ್ಥಿತರಿದ್ದರು.

ಪ್ರಸಾದ್ ಆಚಾರ್ಯ ನಿರೂಪಿಸಿ, ಮಹೇಶ್ ಆಚಾರಿ ಸ್ವಾಗತಿಸಿ, ದೀಪಕ್ ಕುಮಾರ್‌ವಂದಿಸಿದರು. ರೈತಬಾಂಧವರಿಗೆ ದೀಪಾವಳಿ ಹಬ್ಬದ ಪ್ರಯುಕ್ತ ಮಣ್ಣಿನ ಹಣತೆಗಳನ್ನು ನೀಡಲಾಯಿತು.

---

## ಆತ್ಮದ ಬಗ್ಗೆ ಬುದ್ಧನ ವಿಶ್ಲೇಷಣೆ ಮತ್ತು ಅನಾತ್ಮವಾದ

ದೇಹವನ್ನು ಒಂದು ಪಾತ್ರೆಯಂತೆ ಗ್ರಹಿಸಬಹುದು. ಗ್ರಹಿಸಲ್ಪಡುವ ಯಾವುದೇ ಆಗಿರಲಿ ಅದು ಒಂದು ವಸ್ತುವೇ ಆಗಿರಬೇಕು. ಆದರೆ ಗ್ರಹಿಸುವವ ವಿಭಿನ್ನ. ಪರಮಾತ್ಮ, ಸ್ವಯಮಾತ್ಮ ಒಂದಕ್ಕೆ ಮಾತ್ರ ಗ್ರಹಿಸುವ ಶಕ್ತಿಯಿರುವುದು. ಹಾಗೆಯೇ ದೇಹವನ್ನೂ ನಮ್ಮ ಮುಂದೆ ಇಟ್ಟಿರುವ ಪಾತ್ರೆಯಂತೆಯೇ ಗ್ರಹಿಸಬಹುದು. ಅದು ಹೇಗೆ ಆತ್ಮವಾದೀತು? ದೇಹವನ್ನು ಎಲ್ಲ ವಸ್ತುಗಳ ಬದಲಾವಣೆಗೆ ಸಾಕ್ಷಿಯಾಗಿರುವ ಆತ್ಮ ವೆಂದು ಗ್ರಹಿಸುವುದು ದೊಡ್ಡ ಪ್ರಮಾದವಾಗುತ್ತದೆ. ಶಾಶ್ವತವಾದ ಆತ್ಮವೇ ಗ್ರಹಿಸುವ ಚೇತನವಾಗಿದೆ. ಉಳಿದ ಎಲ್ಲವೂ ವಸ್ತುಗಳ ಗುಂಪಿಗೆ ಸೇರಿದವು ಏಕೆಂದರೆ ಅವು ನಿರಂತರವಾಗಿ ಬದಲಾಗುತ್ತಿರುತ್ತವೆ. ನಾವು ಬದಲಾಗುವ ವಸ್ತುಗಳ ಪ್ರತ್ಯಕ್ಷ ದರ್ಶಿಗಳು. ನಾವು ಬದಲಾಗುವ ವಸ್ತುಗಳಲ್ಲ. ದರ್ಶಿಯು ಕ್ಷಣ ಕ್ಷಣಕ್ಕೂ ಬದಲಾಗುವ ದೃಶ್ಯವಾಗಲು ಹೇಗೆ ಸಾಧ್ಯ? "ನಾನು (ಆತ್ಮ)" ಹೇಗೆ ವಸ್ತುವಾಗಲು ಸಾಧ್ಯ? ನಾವು ಇವೆರಡನ್ನೂ ಗೊಂದಲಕ್ಕೀಡುಮಾಡಿ ದೇಹವನ್ನು ಆತ್ಮವೆಂದುಕೊಂಡು ತಪ್ಪು ಮಾಡುತ್ತೇವೆ. ನಾವು ಅವುಗಳ ಪ್ರಮುಖ ಲಕ್ಷಣಗಳನ್ನು ಅದಲು ಬದಲಾಗಿಸುವುದರಿಂದ ದೇಹವೇ ಆತ್ಮದ ಲಕ್ಷಣ ಗಳನ್ನು ಹೊಂದಿರುವಂತೆ ಮತ್ತು ಆತ್ಮವು ದೇಹದಂತೆಯೂ ತೋರುತ್ತದೆ. ಇದು ಭ್ರಾಂತಿಯ ಪರಿಣಾಮ, ನಾವು ಇದರಿಂದ ಹೊರಬರುವುದು ಅತ್ಯಾವಶ್ಯಕ.

ಬುದ್ಧನು ಸಾರಾನಾಥದಲ್ಲಿ ತನ್ನ ಎರಡನೇ ಪ್ರವಚನವನ್ನು ಮಾಡಿದಾಗ ಮೇಲೆ ಹೇಳಿದ ಕಾರ್ಯ ವಿಧಾನವನ್ನೇ ಬಳಸಿ ಸತ್ಯವನ್ನು ಪ್ರತಿಪಾದಿಸಿದನು. ಈ ಪ್ರವಚನವು ವ್ಯಕ್ತಿತ್ವದ ಪರಿಕಲ್ಪನೆಯ ವಿಶ್ಲೇಷಣೆ ಯಾಗಿದೆ. ನಮ್ಮ ನೈಜ ವ್ಯಕ್ತಿತ್ವವನ್ನು ಯಾವ ಶಕ್ತಿಯು ರೂಪಿಸುತ್ತದೆ? ಇದರ ವಿಶ್ಲೇಷಣೆಯ ಅಗತ್ಯವಿದೆ ಎಂದು ಬುದ್ಧನು ಹೇಳುತ್ತಾನೆ. ಮೊದಲನೆಯದಾಗಿ ದೇಹವನ್ನೂ, ನಂತರ ಇಂದ್ರಿಯಗಳನ್ನೂ, ತದನಂತರ ಮನಸ್ಸು, ಸೂಕ್ಷ್ಮ ಆಯಾಮಗಳುಳ್ಳ ಸಂವೇದನೆ, ಅನುಭವ, ಪ್ರವೃತ್ತಿ ಇವುಗಳನ್ನೂ ಒಂದೊಂದಾಗಿ ವಿಶ್ಲೇಷಣೆಯ ವಿಷಯಗಳನ್ನಾಗಿ ತೆಗೆದುಕೊಂಡನು. ಪ್ರತಿಯೊಂದೂ ಅನಾತ್ಮವಸ್ತುವೆಂದೇ ಕಂಡುಬಂದಿತು, ಹೀಗೆ ಅವನು ಒಂದೊಂದಾಗಿ ಅವುಗಳನ್ನು ನಿರಾಕರಿಸಿದನು ಮತ್ತು ಇವುಗಳಲ್ಲಿ ಯಾವುದೂ (ಸ್ವಯಂ) ಆತ್ಮವಲ್ಲವೆಂದು ತೀರ್ಮಾನಿಸಿದನು. ಆದರೆ ಅವನು ಆತ್ಮದ ಬಗ್ಗೆ ಏನನ್ನೂ ಹೇಳಲಿಲ್ಲ. ಇದು ನಂತರದ ದಿನಗಳಲ್ಲಿ ಬೌದ್ಧ ವಿಚಾರವಾದಿಗಳು "ಆತ್ಮವೇ ಇಲ್ಲ" (ಅನಾತ್ಮವಾದ) ಎಂಬ ಸಿದ್ಧಾಂತದ ಆಸರೆ ಪಡೆಯಲು ಪ್ರೇರೇಪಿಸಿತು. ಅವರು ಶಾಶ್ವತವಾದ ಸ್ವಯಮಾತ್ಮ ಎಂಬುದು ಇಲ್ಲವೆಂದೇ ತೀರ್ಮಾನಿಸಿದರು ಮತ್ತು ಎಲ್ಲವೂ ಎಡೆಬಿಡದೆ ಮಾರ್ಪಾಡಾಗುತ್ತಿರುತ್ತವೆ ಎಂದರು. ಈ ವಿಚಾರಧಾರೆ ಯ ಪರಿಣಾಮವೇ ಬುದ್ಧನ ನಂತರದ ಪ್ರಪಂಚದ ಯೋಚನಾಲಹರಿಯಲ್ಲಾದ ವಿಷಮ ಸ್ಥಿತಿ ಮತ್ತು ಬೌದ್ಧ ವಿಚಾರವಾದಿಗಳಿಂದ ಪ್ರಾರಂಭವಾದ ನಿರಾಕರಣವಾದಿ ಸಿದ್ಧಾಂತ.

**ಸ್ವಾಮಿ ರಂಗನಾಥಾನಂದ**



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath
1995-96



Rtn. S. Sadananda Chatra
1996-97



Rtn. B. C. Somayaji
1997-98



Rtn. K. Suresh Kamath
1998-99



Rtn. S. Subraya Halambi
1999-2000



Rtn. S. Vijaya Shetty
2000-01



Rtn. K. Seetharama Nackathaya
2001-02



Rtn. U. S. Shenoy
2002-03



Rtn. Dr. Umesh Puthran
2003-04



Rtn. Dr. B. V. Udupa
2004-05



Rtn. A. Shantharam Pai
2005-06



Rtn. K. Shantharam Prabhu
2006-07

## ರೋಟರಿ ಮಾಹಿತಿ

ರೋಟರಿಯ ಸಾಂವಿಧಾನಿಕ ದಾಖಲೆಗಳಲ್ಲಿ ಸೇವೆಯ ಮಾರ್ಗಗಳನ್ನು ಕುರಿತ ಉಲ್ಲೇಖಗಳು ಇಲ್ಲವಾದರೂ, ಬಹುಪಾಲು ರೋಟೇರಿಯನ್ನರು ರೋಟರಿಯ ಚಟುವಟಿಕೆಗಳನ್ನು ವಿವರಿಸಲು ಈ ಪರಿಕಲ್ಪನೆಯನ್ನು ಅವಲಂಬಿಸುತ್ತಾರೆ. ಸೇವೆಯ ಮಾರ್ಗಗಳು ಎನ್ನುವ ಮಾತು ರೋಟರಿಯ ಉದ್ದೇಶದ ಐದು ನೆಲೆಗಳಿಗೆ ಸೀಮಿತಗೊಳ್ಳುತ್ತವೆ. ಅವುಗಳು ಕ್ಲಬ್‌ನ ಸೇವೆ, ವೃತ್ತಿಸೇವೆ, ಸಮುದಾಯ ಸೇವೆ, ಅಂತರಾಷ್ಟ್ರೀಯ ಸೇವೆ ಹಾಗೂ ಯುವ ಜನ ಸೇವೆ.

- ಒಂದು ಕ್ಲಬ್ಬು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ರೋಟೇರಿಯನ್ನರು ಮಾಡಬೇಕಾದ ಎಲ್ಲಾ ಕೆಲಸಗಳೂ ಕ್ಲಬ್‌ನ ಸೇವೆಯಲ್ಲಿ ಸೇರುತ್ತದೆ.
- ಪ್ರತೀ ರೊಟೇರಿಯನ್ನರೂ ತಮ್ಮ ವೃತ್ತಿಯ ಘನತೆ ಮತ್ತು ಮೌಲ್ಯಗಳನ್ನು ಇತರ ಸದಸ್ಯರಿಗೆ ತೋರಿಸಲು ಇರುವ ಅವಕಾಶದ ಜೊತೆಗೆ ವೃತ್ತಿ ಯೋಜನೆ, ವೃತ್ತಿ ತರಬೇತಿ ಮತ್ತು ಕಾರ್ಯಸ್ಥಳಗಳಲ್ಲಿ ಅತ್ಯುನ್ನತ ನೈತಿಕ ನೆಲೆಯನ್ನು ಕಾಯ್ದುಕೊಳ್ಳಬೇಕಾದ ಜವಾಬ್ದಾರಿಗಳನ್ನು ವೃತ್ತಿ ಸೇವೆಯು ಒಳಗೊಂಡಿರುತ್ತದೆ.
- ರೊಟೇರಿಯನ್ನರು ತಮ್ಮ ಸಮುದಾಯದ ಜೀವನ ಮಟ್ಟವನ್ನು ಮೇಲೆತ್ತಲು ಕೈಗೊಳ್ಳುವ ಕಾರ್ಯಗಳನ್ನು ಸಮುದಾಯ ಸೇವೆಯು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಇದರಲ್ಲಿ ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸಲು ರೋಟರಿಯ ನೆರವು ಕೋರುವ ಯುವ ಜನಾಂಗಕ್ಕೆ, ವೃದ್ಧರಿಗೆ, ವಿಕಲಾಂಗರಿಗೆ ಒದಗಿಸುವ ಸೇವೆಗಳು ಸೇರಿರುತ್ತವೆ.
- ಅಂತರಾಷ್ಟ್ರೀಯ ಸೇವೆಗಳಲ್ಲಿ ರೊಟೇರಿಯನ್ನರು ಜಾಗತಿಕ ಸದ್ಭಾವನೆ, ತಿಳುವಳಿಕೆ ಮತ್ತು ಶಾಂತಿಗಳಿಗಾಗಿ ಕೈಗೊಳ್ಳುವ ಕಾರ್ಯಕ್ರಮಗಳು ಸೇರುತ್ತವೆ. ಅಭಿವೃದ್ಧಿಶೀಲ ದೇಶಗಳಲ್ಲಿನ ಮಾನವೀಯ ನೆಲೆಯ ಅಗತ್ಯತೆಗಳನ್ನು ಪೂರೈಸುವುದಲ್ಲದೇ, ನೈಸರ್ಗಿಕ ಪ್ರಕೋಪಗಳ ಬಳಿಕ ನಡೆಯುವ ಪುನರ್‌ನಿರ್ಮಾಣದ ಕೆಲಸದ ಪ್ರಯತ್ನಗಳು ಅಂತರಾಷ್ಟ್ರೀಯ ಕಾರ್ಯಯೋಜನೆಗಳಲ್ಲಿ ರೂಪಿಸಲಾಗಿದೆ.
- ಮುಂದಿನ ಭವಿಷ್ಯವಾದ ಯುವ ಜನಾಂಗಕ್ಕೆ ಸರಿಯಾದ ಮಾರ್ಗದರ್ಶನವನ್ನು ನೀಡಿ ಅವರ ಭವಿಷ್ಯಕ್ಕೆ ಹಲವು ರೀತಿಯ ಕಾರ್ಯಸೂಕ್ತಿಗಳನ್ನು ರೂಪಿಸಿ ಮಾರ್ಗದರ್ಶನವನ್ನು ನೀಡುವುದು ಯೂತ್ ಸರ್ವಿಸ್‌ನ ಭಾಗವಾಗಿರುತ್ತದೆ.
- ರೋಟೇರಿಯನ್ನರು ಈ ಐದು ಸೇವೆಯ ಮಾರ್ಗವನ್ನು ಅರಿತು ಅದರಲ್ಲಿ ಸಾಗಿದಾಗ ಮಾತ್ರ ರೋಟರಿಯಉದ್ದೇಶಕ್ಕೆ ಹೆಚ್ಚಿನ ಅರ್ಥ ಬರುತ್ತದೆ.

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



**ತಾ. 10–11–2025ನೇ ಸೋಮವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಓಜ್ಲೀನ್ ರೆಬೆಲ್ಲೋ ಮತ್ತು ಆ್ಯನ್ ಲತಾ ರೆಬೆಲ್ಲೋರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9980192203**

*This Bulletin is sponsored by :*


**Rtn. Mahendra Shetty**
**Mob. : 9008444559**

For Private Circulation only

Email id – rotaryclub.kundapurasouth@gmail.com



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25